ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 54-59
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಕಾದಂಬರಿಗಳಲ್ಲಿ ದಲಿತರ ಭೂಮಿ ಪ್ರಶ್ನೆ

**ಡಾ.ಸಂದೀಪ್ ಡಿ.ಡಿ**
ಪಿಡಿಎಫ್ ಸಂಶೋಧಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***Abstract:***
*ಕನ್ನಡ ಕಾದಂಬರಿ ಸಾಹಿತ್ಯವು ದಲಿತ ಸಮುದಾಯದ ಅನೇಕ ಸಮಸ್ಯೆಗಳನ್ನು ಗ್ರಹಿಸಿದೆ ಮತ್ತು ಅಭಿವ್ಯಕ್ತಿಸಿದೆ. ಅಸ್ಪೃಶ್ಯತೆ, ಜಾತೀಯತೆಯ ಸಮಸ್ಯೆ, ಮತಾಂತರ, ಶಿಕ್ಷಣದ ಸಮಸ್ಯೆ, ನ್ಯಾಯ ವ್ಯವಸ್ಥೆ, ಆಹಾರ ಸಮಸ್ಯೆ, ಭೂಮಿಯ ಒಡೆತನದ ಪ್ರಶ್ನೆ ಮುಂತಾದ ಹಲವು ಸಮಸ್ಯೆಗಳನ್ನು ಕಾದಂಬರಿಗಳು ತಮ್ಮ ಕೇಂದ್ರ ಭಿತ್ತಿಯಲ್ಲಿ ಚರ್ಚಿಸುತ್ತಾ ಬಂದಿವೆ. ಅವುಗಳಲ್ಲಿ ಭೂಮಿ ಪ್ರಶ್ನೆಯು ಮುಖ್ಯವಾಗಿದೆ. ದಲಿತರ ಭೂಮಿ ಪ್ರಶ್ನೆ ಕುರಿತ ಚರ್ಚೆ ನಿನ್ನೆ ಮೊನ್ನೆಯದಲ್ಲ ದಲಿತರು ಭೂಮಿಯ ಹಕ್ಕಿನಿಂದ ವಂಚನೆಗೆ ಒಳಗಾದ ದಿನಗಳಿಂದಲೂ ಈ ಚರ್ಚೆಗಳು ಇದ್ದಿರಲೂಬಹುದು.*

***Keywords:*** *ಕಾದಂಬರಿ ಸಾಹಿತ್ಯ, ಶೋಷಿತರು, ದಲಿತರು, ಭೂಮಿ, ಭೂ ಹಕ್ಕು, ಜೋಮನ ದುಡಿ, ಜೀತಪದ್ಧತಿ.*

**ಪೀಠಿಕೆ**

ಕೃಷಿ ಕೂಲಿ ಕಾರ್ಮಿಕರು, ಅಸ್ಪೃಶ್ಯರು, ಭೂಮಾಲೀಕರ ಶೋಷಣೆಗೆ ಒಳಗಾದ ದಮನಿತ ಸಮುದಾಯವಾದ ದಲಿತರು ಶತಶತಮಾನಗಳಿಂದ ಮೇಲ್ಜಾತಿಯ ಶೋಷಣೆಗೆ ಒಳಗಾಗಿ ಆ ಸಂಕೋಲೆಯಿಂದ ಬಿಡುಗಡೆಗಾಗಿ ಪ್ರಯತ್ನಿಸುತ್ತಿರುವ ಸಮುದಾಯವಿದು. 'ಇವರಿಗೆ ಬೇಕಾಗಿರುವುದು ಊಟ, ಬಟ್ಟೆ, ಭೂಮಿ ಮತ್ತು ಮಳೆ ಬಂದರೂ ಬೀಳದಿರುವ ಮನೆಗಳು' (ಸಿದ್ದಲಿಂಗಯ್ಯ) ಸ್ವಾತಂತ್ರ್ಯ ಬಂದು 76 ವರ್ಷಗಳು ಕಳೆದರೂ ದಲಿತರು ಮೂಲಭೂತ ಸಮಸ್ಯೆಗಳಿಂದ ಮುಕ್ತರಾಗಿಲ್ಲ. ಇಂದಿಗೂ ಇದೇ ಬೇಡಿಕೆಯಲ್ಲೇ ದಲಿತರು ಸಾಗಿರುವುದು ಶೋಚನೀಯ. ಇಷ್ಟು ಸುಧೀರ್ಘ ಕಾಲ ದಲಿತರ ಹಕ್ಕುಗಳನ್ನು ವ್ಯವಸ್ಥಿತವಾಗಿ ವಂಚಿಸಿರುವ ಮೇಲ್ಜಾತಿಯ ಜನರು ಇನ್ನೂ ಜಾತಿ ಮನಸ್ಥಿತಿಯಿಂದ ಹೊರಬರದೆ ಇರುವುದು ಈ ದೇಶದ ದೊಡ್ಡ ದುರಂತವೇ ಸರಿ. ಇಂದಿನ ಆಧುನಿಕ ಯುಗದಲ್ಲಿಯೂ ಕುದರೆ ಸವಾರಿ ಮಾಡಿದ್ದಕ್ಕೆ, ಬೈಕ್ ಹಿಂದಿಕ್ಕಿದ್ದಕ್ಕೆ, ಮೇಲ್ಜಾತಿಯ ಹೆಣ್ಣನ್ನು ಪ್ರೀತಿಸಿದ ಕಾರಣಕ್ಕಾಗಿ ದಲಿತರ ಹತ್ಯೆ ಮಾಡುವ ಮಟ್ಟಿಗೆ ಮೇಲ್ಜಾತಿಯ ಕ್ರೌರ್ಯಗಳು ನಮ್ಮ ನಡುವೆ ಇಂದಿಗೂ ರಾರಾಜಿಸುತ್ತಿವೆ.

ಇಂತಹ ಸಂದರ್ಭದಲ್ಲಿ ದಲಿತರ ಭೂಮಿಯ ಪ್ರಶ್ನೆಯನ್ನು ಕೇಳಿಕೊಳ್ಳುವ ಅಗತ್ಯವಿದೆ. ಏಕೆಂದರೆ ಭೂಮಿಯ ಒಡೆತನ ಇಲ್ಲದೆ ಇರುವುದು ಅವರ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸಮಸ್ಯೆಗಳಿಗೆ ನೇರ ಕಾರಣವಾಗಿದೆ. ಇತ್ತೀಚಿಗೆ ಸದಾಶಿವ ಆಯೋಗವು ಕರ್ನಾಟಕದಲ್ಲಿ ದಲಿತರ ಭೂಮಿಯ ಒಡೆತನ ಕೇವಲ ಶೇಕಾಡ 5 ರಷ್ಟು ಎಂದು ವರದಿ ಮಾಡುತ್ತದೆ. ಈ ವರದಿಯ ಪ್ರಕಾರ ಶೇಕಾಡ 95 ರಷ್ಟು ಭೂಮಿಯ ಒಡೆತನ

***Please cite this article as:*** ಸಂದೀಪ್ ಡಿ.ಡಿ. (2023). ಕನ್ನಡ ಕಾದಂಬರಿಗಳಲ್ಲಿ ದಲಿತರ ಭೂಮಿ ಪ್ರಶ್ನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(4), 54–59.

ಮೇಲ್ಜಾತಿಯವರ ಕೈಯಲ್ಲಿರುವುದು ಸ್ಪಷ್ಟವಾಗುತ್ತದೆ. ಇದರಿಂದ ಗೊತ್ತಾಗುವುದು ದಲಿತರು ಭೂಹೀನರು, ಅವರನ್ನು ಭೂಮಿಯ ಒಡೆತನದಿಂದ ವಂಚಿಸಿ ಕೂಲಿ ಕಾರ್ಮಿಕರಾಗಿ ದುಡಿಯುವಂತಹ ಪರಿಸ್ಥಿತಿಯನ್ನು ಸಾಮಾಜಿಕ ವ್ಯವಸ್ಥೆ ಸೃಷ್ಟಿಸಿದೆ. ಜಾತಿಯ ಕಾರಣಕ್ಕಾಗಿ ಭೂಮಿಯ ಒಡೆತನದಿಂದ ದೂರ ತಳ್ಳಿದವರು ಇದೇ ಮೇಲ್ಜಾತಿಯವರು. ಇಂದಿಗೂ ಆಳುವ ವರ್ಗದ ಬೆಂಬಲದೊಂದಿಗೆ ಅವರನ್ನು ನಿಯಂತ್ರಿಸಿ ಅವರ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಧಮನ ಮಾಡುತ್ತಿರುವವರು ಇದೇ ವರ್ಗದವರು. ಇಂತಹ ಭೂಸಂಬಂಧಗಳನ್ನು ಕನ್ನಡ ಕಾದಂಬರಿಗಳು ಸೂಕ್ಷ್ಮವಾಗಿ ಚರ್ಚಿಸಿರುವುದು ಹೀಗೆ;

ಶಿವರಾಮ ಕಾರಂತರ 'ಚೋಮನ ದುಡಿ' ಕಾದಂಬರಿಯು ಮೊದಲು ದಲಿತರ ಭೂಮಿಯ ಪ್ರಶ್ನೆಯನ್ನು ಮುಖ್ಯ ಭೂಮಿಕೆಯಲ್ಲಿ ಚರ್ಚಿಸಿದೆ. ಚೋಮನು ಇಲ್ಲಿ ಭೂರಹಿತ ಕೃಷಿಕ ಹಾಗೂ ಜೀತಗಾರ, ಎಲ್ಲ ಸೌಲಭ್ಯದಿಂದ ವಂಚನೆಗೆ ಒಳಗಾದ ಅಸ್ಪೃಶ್ಯ ಜಾತಿಯವನು. ತನ್ನದಲ್ಲದ ಭೂಮಿಯಲ್ಲಿ ಕೂಲಿ ಇಲ್ಲದೆ ದುಡಿಯುವಾತ. ಇವನಿಗೆ ಸ್ವಂತ ಭೂಮಿಯಲ್ಲಿ ಸ್ವತಂತ್ರವಾಗಿ ವ್ಯವಸಾಯ ಮಾಡುವ ಬಯಕೆ ಹಾಗೂ ಏಕೈಕ ಉದ್ದೇಶ ಇವನದು. ಅದಕ್ಕಾಗಿ ತಾನು ಜೀತಮಾಡುವ ದಣಿ ಸಂಕಪ್ಪಯ್ಯನ ಬಳಿ ಗೇಣಿಗಾಗಿ ಭೂಮಿಯನ್ನು ಕೇಳುತ್ತಾನೆ. ಆದರೆ ಮೂರು ಭಾರಿ ಕೇಳಿದರು ದೊರಕುವುದಿಲ್ಲ. ಕಾರಣ ಇಷ್ಟೇ; ಅಸ್ಪೃಶ್ಯರು ಜೀತಗಾರಿಕೆಯನ್ನು ಮಾಡಬೇಕೆ ಹೊರತು ಸ್ವಂತ ಭೂಮಿ ಒಡೆತನ ಹೊಂದುವುದು, ಸ್ವತಂತ್ರ ಉಳುಮೆಗಾಗಿ ಗೇಣಿಗೆ ಭೂಮಿ ಕೇಳುವುದು ಅಪರಾಧ ಎಂದು ಮೇಲ್ಜಾತಿಯು ಭಾವಿಸುತ್ತದೆ. ಏಕೆಂದರೆ ಜೀತಗಾರಿಕೆಯಿಂದ ಸಂಪೂರ್ಣ ಲಾಭ ಭೂಮಾಲೀಕರಿಗೆ ಸಿಗುತ್ತದೆ. ಅದಕ್ಕಾಗಿಯೇ ತನಗೆ ಬೇಕಾದ ವಾದವನ್ನೇ ಸಮಾಜದ ಮೇಲೆ ಹೇರುತ್ತಿದ್ದಾರೆ. ದಲಿತರು ಸಂಪತ್ತಿನ ಒಡೆತನವನ್ನು ಹೊಂದುವುದನ್ನು ಇವರು ಒಪ್ಪುವುದಿಲ್ಲ. ಜಾತಿವಾದವನ್ನು ಮುಂದಿಟ್ಟು ಭೂಮಿಯನ್ನು ನಿರಾಕರಿಸುವರು. ಜೊತೆಗೆ ಚೋಮನು ನಂಬಿದ ಸನಾತನ ಧರ್ಮವನ್ನ, ಆದರೆ ಈ ಸನಾತನ ಧರ್ಮದಲ್ಲಿ ದಲಿತರನ್ನು ಎಂದಿಗೂ ಸಮನಾಗಿ ನೋಡಿರುವ ಇತಿಹಾಸವೇ ಇಲ್ಲ. ಅಂತಹದ್ದರಲ್ಲಿ ಚೋಮನಿಗೆ ಗೇಣಿಗಾಗಿ ಸ್ವತಂತ್ರ ಬೇಸಾಯ ಮಾಡುವುದನ್ನು ಒಪ್ಪುವುದಕ್ಕೆ ಎಲ್ಲಿಂದ ಸಾಧ್ಯ. ಸಂಕಪ್ಪಯ್ಯ, ಮತ್ತು ಅವರ ತಾಯಿಯು ಅವನ ಏಕೈಕ ಕನಸನ್ನು ಹೊಸಕಿ ಹಾಕುತ್ತಾರೆ. ಸಂಕಪ್ಪಯ್ಯನ ತಾಯಿ 'ಅಬ್ಬಾ ಹೊಲೆಯರಿಗೆ ಬಂದ ಸೊಕ್ಕೇ' ಎನ್ನುವ ಮಾತಿನಲ್ಲಿ ಜಾತಿವಾದದ ಅಹಂಕಾರ ಮನಸ್ಥಿತಿ ಎದ್ದು ಕಾಣಿಸುತ್ತದೆ. ದಲಿತರ ಎಲ್ಲ ಹಕ್ಕುಗಳಿಂದ ವಂಚಿಸಿರುವ ಇಂತಹ ಸಂಪ್ರಾದಯವಾದಿ ಮಾಲೀಕರಿಂದ ಬಿಡುಗಡೆಗಾಗಿ ಚೋಮನ ಕುಟುಂಬ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಲು ನಿರ್ಧರಿಸುತ್ತದೆ. ಚೋಮನ ಮಕ್ಕಳು ಮತಾಂತರವಾಗುತ್ತಾರೆ. ಆದರೆ ಚೋಮನಿಗೆ ಮಾತ್ರ ಬಿಡುಗಡೆ ಸಾಧ್ಯವಾಗಲಿಲ್ಲ. ಏಕೆಂದರೆ ಚೋಮ ಮತಾಂತರ ಹೊಂದಿ ಭೂಮಿ ಪಡೆಯಲು ಇಚ್ಚಿಸುತ್ತಾನೆ ಆ ಸಂದರ್ಭದಲ್ಲಿ ಚೋಮನ ನಡೆ ಕುರಿತು ಪಂಜುರ್ಲಿ ಮಾತನಾಡುತ್ತದೆ. "ಚೋಮ ಮೀಸೆ ಹಣ್ಣಾಗುವ ತನಕ ನನ್ನನ್ನು ನಂಬಿ ಈಗ ಸಾಯುವ ಮೂರು ದಿನಗಳ ಮುಂಚೆ ನನ್ನನ್ನು ಬಿಟ್ಟು ಪಾದ್ರಿ ಹಿಂದೆ ಓಡುವಿಯೋ"[1] ಎಂದು ಪಂಜುರ್ಲಿಯ ಮಾತಿನಿಂದ ಚೋಮ ತನ್ನ ನಿರ್ಧಾರವನ್ನು ಬದಲಾಯಿಸಿಕೊಳ್ಳುತ್ತಾನೆ. ಇದು ದಲಿತರು ಶೋಷಣೆ ಮಾಡುವ ಧರ್ಮದಿಂದ ಬಿಡುಗಡೆಯನ್ನು ಬಯಸಿದರೆ, ಅವರನ್ನು ಅಲ್ಲೆ ಕಟ್ಟಿಹಾಕುವ ಮೇಲ್ಜಾತಿಯ ತಂತ್ರವು ಇಲ್ಲಿ ನಿರೂಪಣೆಯಾಗಿದೆ. ಇದು ಒಂದು ಬಗೆಯ ಸಾಂಸ್ಕೃತಿಕ ಯಜಮಾನಿಕೆ ಆಗಿದೆ. ಆದರೆ ಕಾದಂಬರಿಯು ದಲಿತರು ಮತಾಂತರ ಹೊಂದುವುದರ ಮೂಲಕ ಭೂಮಿಯನ್ನು ಪಡೆದುಕೊಳ್ಳಬಹುದು ಎಂದು ಸೂಚಿಸುತ್ತದೆ. ಈ ಮೂಲಕ ಚೋಮನಿಗೆ ಬಿಡುಗಡೆಯನ್ನು

ಬಯಸುತ್ತದೆ ಆದರೆ ಸಮ್ಮತಿಸದಿರುವುದನ್ನು ಕಾದಂಬರಿಯಲ್ಲಿ ಕಾಣುತ್ತೇವೆ.

ಆದರೆ ಇದಕ್ಕೂ ವಿರುದ್ಧವಾದ ಚಿಂತನೆ ಕುವೆಂಪು ಕಾದಂಬರಿಯಲ್ಲಿ ಕಾಣುತ್ತೇವೆ. ಕುವೆಂಪು ಕಾದಂಬರಿಗಳಲ್ಲಿ ದಲಿತರ ಸ್ವಂತ ಬೇಸಾಯದ ವಿಷಯವಾಗಲಿ, ಒಡೆತನದ ಪ್ರಶ್ನೆಯಾಗಲಿ ಕಾಣಿಸುವುದೇ ಇಲ್ಲ. ದಲಿತರೆಲ್ಲರೂ ಜೀತಗಾರರು, ಅಸ್ಪೃಶ್ಯರು ಇವರನ್ನು ಪುರೋಹಿತಶಾಹಿಯ ವ್ಯವಸ್ಥೆಯು ಶೋಷಣೆ ಮಾಡುವುದನ್ನು ಚಿತ್ರಿಸಲಾಗಿದೆ. ಜೊತೆಗೆ ದಲಿತ ಪಾತ್ರಗಳಿಗೆ ಜೀವಂತಿಕೆಯೆ ಕಾಣಿಸುವುದಿಲ್ಲ. ಶೋಷಣೆಯನ್ನು ಒಪ್ಪಿಕೊಂಡು ಹೋಗುವಂತಹ ಪಾತ್ರಗಳು ಕಾದಂಬರಿಯಲ್ಲಿ ಕಾಣಿಸುತ್ತವೆ. ಮೇಲ್ಜಾತಿಗಳು ದಲಿತರ ಮೇಲೆ ದೌರ್ಜನ್ಯ ಮಾಡುವುದರ ಮೂಲಕ ಅವರನ್ನು ನಿಯಂತ್ರಿಸುತ್ತಿರುವುದು ಕಾದಂಬರಿಯಲ್ಲಿ ಕಾಣುತ್ತೇವೆ. ಭೂಮಾಲೀಕರೆಲ್ಲ ಸಭೆ ಸೇರಿ ಮಾಡುವ ನಿರ್ಧಾರ, ದಲಿತರ ಹಕ್ಕುಗಳನ್ನು ವಂಚಿಸುವ ಹಾಗೂ ಅವರನ್ನು ನಿಯಂತ್ರಿಸುವ ವಿಷಯಕ್ಕೆ ಸಂಬಂಧಿಸಿದೆ. “ವೇದ ಕಲಿಯುವುದು ಶೂದ್ರರಿಗೆ ಹೇಗೆ ನಿಷಿದ್ಧವೋ ಹಾಗೆ ಸ್ವಂತ ಜಮೀನು ಮಾಡುವುದು ಹಳೆಪೈಕದವರಿಗೆ ನಿಷಿದ್ಧ ಎಂಬುದು ಮಲೆನಾಡಿನ ಭೂಮಾಲೀಕ ವರ್ಗದ ತೀರ್ಮಾನ”[2] ಆಗಿದೆ. ಈ ನಿರ್ಬಂಧ ದಲಿತರ ಭೂ ಒಡೆತನದವನ್ನು ತಡೆಯುವುದಕ್ಕೆ ತಂದಿರುವಂತದು. ಅಂದರೆ ದಲಿತರು ಜೀವನ ಪರ್ಯಾಂತ ಜೀತಗಾರರಾಗಿಯೇ ಮುಂದುವರೆಯುವುದುನ್ನು ಮೇಲ್ವರ್ಗದವರು ಭೂಮಾಲೀಕರು ಬಯಸುತ್ತಾರೆ. ಕಾದಂಬರಿಯಲ್ಲಿ ಬರುವ ದಲಿತರು, ಜೀತಗಾರರಿಗೂ ಅಂಗೈಯಗಲದಷ್ಟೂ ಭೂಮಿಯಿಲ್ಲ. ಅಂದರೆ ಎಲ್ಲರೂ ಭೂಮಿಯಿಂದ ವಂಚನೆಗೆ ಒಳಗಾಗಿರುವ ಜನರೇ, ಅವರ ಬದುಕಿನ ಭಾವನೆಗಳಲ್ಲಿಯೂ ಭೂಮಿಯ ಭಾವನೆಗಳು ಸುಳಿಯುವುದಿಲ್ಲ. ಅಂದರೆ ದುಡಿಯುವ ಜನರಿಗೆ ಖಾಸಗಿ ಭೂಮಿಯ ಭಾವನೆಗಳಿಲ್ಲದ, ಕನಸುಗಳಿಲ್ಲದಂತಹ ದುಡಿಯುವ ವರ್ಗದ ಪಾತ್ರಗಳು ಕಾಣಿಸಿಕೊಳ್ಳುತ್ತವೆ. ಹಾಗಾಗಿ ‘ಜಮೀನ್ದಾರಿ ವ್ಯವಸ್ಥೆಯಲ್ಲಿ ದಲಿತರು ಮತ್ತು ಹೆಣ್ಣು ಮಕ್ಕಳು ದಮನಿತರಾಗಿ ತುಳಿತಕ್ಕೆ ಒಳಗಾಗಿ ಶೋಷಿತರಾಗಿ, ಬದುಕುವ ವಾಸ್ತವ ಚಿತ್ರ ಕುವೆಂಪು ಕಾದಂಬರಿಯಲ್ಲಿ ದಾಖಲಾಗಿದೆ’ ಎನ್ನುವ ರಹಮತ್ ತರೀಕೆರೆಯವರ ಮಾತು ಒಪ್ಪುವಂತದ್ದೆ. ಇದು ಭೂಮಾಲೀಕರು ದಲಿತರನ್ನು ನಡಿಸಿಕೊಳ್ಳುವ ರೀತಿ ಅಥವ ಇತರೆ ಯಾವುದನ್ನು ಪ್ರಶ್ನಿಸುವಾಗಿಲ್ಲ. ತನ್ನತನವನ್ನು ಕಳೆದುಕೊಂಡು ಬದಕಬೇಕು. ಪ್ರಭುತ್ವ ಜೀವಂತವಾಗಿದೆ ಎನ್ನುವುದನ್ನು ತೋರಿಸಲು ದುಡಿಯುವವರ ಮೇಲೆ ಆರೋಪ ಹೊರಿಸಿ ‘ಹೊನ್ನಾಳಿ ಹೊಡ್ತವು’ ಹೊಡೆಸುವುದು ಶೋಷಕರ ಕ್ರೂರತೆಗಳ ಕಾರಾಳ ಮುಖವಾಗಿದೆ. ಕಾದಂಬರಿಗಳು ದಲಿತರ ನಿಜವಾದ ಸಮಸ್ಯೆಗಳನ್ನು ಪ್ರಜ್ಞೆಯ ಭಾಗವಾಗಿ ಗ್ರಹಿಸದ ಕಾರಣಕ್ಕಾಗಿ ಬಿ. ಕೃಷ್ಣಪ್ಪನವರು ಕುವೆಂಪುರವರು ತಮಗಿಂತ ಮೇಲಿರುವ ಬ್ರಾಹ್ಮಣಶಾಹಿಯನ್ನು ಪ್ರತಿಭಟಿಸುವ ಭರದಲ್ಲಿ ಕುವೆಂಪು ಅವರಿಗೆ ಶೂದ್ರರಿಗಿಂತ ಕೆಳಮಟ್ಟದಲ್ಲಿರುವ ದಲಿತರು ಕಾಣದೆ ಹೋದರು ಎನ್ನುವ ಮಾತು ಸತ್ಯವಾದುದೆ.

ಗೊರೂರು ಅವರ ‘ಹೇಮಾವತಿ’ ಕಾದಂಬರಿಯಲ್ಲಿ ದಲಿತರು ನಿರಂತರವಾಗಿ ಭೂಮಾಲೀಕರ ಮನೆಯ ಜೀತದಾಳುಗಳು ಇವರಲ್ಲಿ ಕೆಲವರಿಗೆ ಅಂಗೈಯಗಲದ ಭೂಮಿಯಿದ್ದರೂ ಅದು ಗುಡ್ಡದ ಮೇಲೆ, ಕೆಲಸಕ್ಕೆ ಬಾರದ ಭೂಮಿಯಾಗಿದೆ. ಬದುಕಿಗಾಗಿ ಸವರ್ಣೀಯರ ಮನೆಯಲ್ಲಿ ಜೀತ ಮಾಡಿಕೊಂಡು ಜೀವನವನ್ನು ನಡೆಸಬೇಕು. ಕಾದಂಬರಿಯಲ್ಲಿ ಕಾಳನ ಪಾತ್ರವನ್ನು ಗಮನಿಸಿದರೆ, ಅವನ ತಂದೆ, ಅಜ್ಜ, ಮುತ್ತಜ್ಜ, ಎಲ್ಲರೂ ಶ್ರೀನಿವಾಸ ಪೆರುಮಾಳರ ಮನೆಯ ಖಾಯಂ ಜೀತಗಾರರಾಗಿ ದುಡಿದಿದ್ದಾರೆ. ಇದನ್ನು ಗಮನಿಸಿದರೆ, ದಲಿತರನ್ನು ಒತ್ತಾಯಪೂರ್ವಕವಾಗಿ ಜೀತಪದ್ಧತಿಗೆ ತಳ್ಳಿರುವುದು ಸ್ಪಷ್ಟವಾಗುತ್ತದೆ. ಮೇಲ್ಜಾತಿಯ ಜನರು ತಮ್ಮ ಸೇವೆ ಮಾಡಲು ದಲಿತರನ್ನು ಗುಲಾಮರಾಗಿ

ಬಳಸಿಕೊಳ್ಳುತ್ತಿರುವುದು ನೋಡಬಹುದು. ಅವರ ಶ್ರಮ ಶೋಷಣೆ ಮಾಡಿ ಶ್ರೀಮಂತಿಕೆಯಲ್ಲಿ ಮೆರೆಯುವ ಮೇಲ್ಜಾತಿಯ ನಿಕೃಷ್ಟತೆ ಗೋಚರಿಸುತ್ತದೆ. ಇದನ್ನು ಬದಲಾಯಿಸಬೇಕು ಎನ್ನುವ ಆಶಯ ಕಾದಂಬರಿಯಲ್ಲಿದೆ, ಆದರೆ ಬದಲಾಯಿಸುವ ದಾರಿ ಮಾತ್ರ ಯಾಂತ್ರಿಕವಾಗಿದೆ. ದೇಗುಲ ಪ್ರವೇಶ, ಮೌಢ್ಯ ನಿವಾರಣೆ, ಸಂಗೀತವನ್ನು ದಲಿತರು ಕಲಿಯುವುದರಿಂದ ಬದಲಾವಣೆಯನ್ನು ಬಯಸುತ್ತದೆ. ಆದರೆ ಮೂಲ ಸಮಸ್ಯೆಯಾದ ಜೀತಪದ್ಧತಿ ಕುರಿತು ಚಕಾರ ಎತ್ತುವುದಿಲ್ಲ. ಈ ಜೀತಪದ್ಧತಿಯಿಂದ ದಲಿತರ ಬಿಡುಗಡೆಯಾಗದ ಹೊರತು ಭೂ ಒಡೆತನ ದಲಿತರಿಗೆ ದೊರಕುವುದು ಅಸಾಧ್ಯ.

ಕೆಲವೊಮ್ಮೆ ಕಾದಂಬರಿಕಾರು ತನ್ನ ಹಿತಾಸಕ್ತಿಯನ್ನು ದಲಿತರ ಮೇಲೆ ಆರೋಪಿಸುವುದನ್ನು ನೋಡುತ್ತೇವೆ. ರಾವ್ ಬಹುದ್ದೂರ್ ಅವರ ಗ್ರಾಮಾಯಣದಲ್ಲಿ ಇದನ್ನು ನೋಡಬಹುದು. ಈ ಕಾದಂಬರಿಯಲ್ಲಿ ಬರುವ ದಲಿತ ಸಮುದಾಯದವರು ಜೀತಗಾರರು ಹಾಗೂ ಭೂರಹಿತರು ಇವರಲ್ಲಿ ಭೂಮಿಯ ಪ್ರಜ್ಞೆಯು ಕಾಣಿಸುವುದಿಲ್ಲ. ವಾಡೆಯ ಜಮೀನು ಮಹಾರಾಜರ ಹೆಸರಿಗೆ ಆದಾಗ, ಸ್ವಂತದ ವ್ಯವಸಾಯಕ್ಕೆಂದು ಇದ್ದ ಜಮೀನನ್ನು ತೆಗೆದು, ಗೇಣಿಯನ್ನು ನಿರ್ಧರಿಸಿ, ರೈತರಿಗೆ ನೀಡಬೇಕು ಎಂಬ ನಿರ್ಧಾರ ಆಗುತ್ತದೆ. ಆಗ ಹೊಲೆಯರು ತಮ್ಮ ಮೊದಲ ವೃತ್ತಿಯಿಂದ ಬೇರ್ಪಡುತ್ತಾರೆ. ಅದಕ್ಕೆ ಅವರೂ ರೈತರಾಗಲಿ ಎಂಬ ಸೂಚನೆ ಶಾಮರಾಯನಿಂದ ಬರುತ್ತದೆ. ಆದರೆ ಅವರಾರೂ ಬೇಸಾಯಗಾರರಾಗಲು ಹಾತೊರೆಯುವುದಿಲ್ಲ, ಬದಲಿಗೆ ಜೀತವೇ ತಮಗೆ ಹಿತ, ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈ ತೀರ್ಮಾನದ ಹಿಂದಿರುವ ರಾಜಕೀಯವು ಮೇಲ್ಜಾತಿಯದು. ದಲಿತರು ಜೀತಪದ್ಧತಿಯ ಜೇಡರ ಬಲೆಗೆ ಸಿಕ್ಕಿ ಸಾಯುತ್ತಿರುವಾಗ ಅದನ್ನು ಶ್ರೇಷ್ಠತೆಯ ರೀತಿಯಲ್ಲಿ ಚಿತ್ರಿಸುವುದು ಒಂದು ರೀತಿಯಲ್ಲಿ ಬ್ರಾಹ್ಮಣವಾದದ ಮನಸ್ಥಿತಿ.ಜೀತಪದ್ಧತಿಯು ದಲಿತರನ್ನು ನಿಯಂತ್ರಿಸುವ ಅಥವಾ ಹಿಂಸಿಸುವ ಸಲುವಾಗಿ ತಂದಿರುವ ಪದ್ಧತಿಯಿದು ಎಂಬುದನ್ನು ಈ ಕಾದಂಬರಿಯು ಸಮರ್ಥನೆ ಮಾಡುತ್ತಿದೆ. ಇವರಿಗೆ ಇರುವ ಜಮೀನ್ದಾರಿ ವ್ಯವಸ್ಥೆಯನ್ನು ಒಪ್ಪಿಕೊಂಡು ಹೋಗುತ್ತಿರಬೇಕು ಎಂದು ಅರ್ಥೈಸುತ್ತದೆ. ಅವರ ಮುಂದೆ ಭೂಮಿಯ ಹಕ್ಕಿನ ಪ್ರಶ್ನೆಯಾಗಲಿ, ಬೇಸಾಯದ ಪ್ರಶ್ನೆಯಾಗಲಿ ಇಲ್ಲಿ ಮುಖ್ಯವಾಗುವುದಿಲ್ಲ ಅಥವಾ ಜೀತ ಮುಕ್ತತೆಗೆ ಸಣ್ಣ ಪ್ರಯತ್ನವೂ ಕಾಣಿಸುವುದಿಲ್ಲ. ರಾಣೋಜಿರಾಯನ ಮರಣವು ಆಸ್ತಿ, ಅಧಿಕಾರದ ಕಲಹಕ್ಕೆ ಕಾರಣವಾಗುತ್ತದೆ. ಅದರ ಪರಿಣಾಮ ಆಸ್ತಿ, ಅಧಿಕಾರ ಮೇಲ್ಜಾತಿಯಲ್ಲಿ ಪಲ್ಲಟ ಆಗುತ್ತದೆ. ಈ ಗ್ರಾಮಾಯಣ ಕಾದಂಬರಿಯು ತೆಲಂಗಾಣ ರೈತ ಹೋರಾಟ ಸಂದರ್ಭ ಹಾಗೂ ಪರಿಸರದಲ್ಲಿ ರಚನೆಯಾಗಿದ್ದು, ಹೋರಾಟದ ಘೋಷವಾಕ್ಯ 'ಉಳುವವನೆ ಭೂಮಿಯ ಒಡೆಯ' ಎನ್ನುವ ದುಡಿಯುವ ವರ್ಗದ ರಾಜಕೀಯ ಹೋರಾಟದ ಪ್ರಭಾವ ಇದ್ದರೂ, ದುಡಿಯುವ ಜನರ, ದಲಿತರ ಭೂಮಿಯ ಒಡೆತನದ ಸಣ್ಣ ಸುಳಿವು ಕೂಡ ಕಾದಂಬರಿಯಲ್ಲಿ ಚಿತ್ರಣವಾಗಿಲ್ಲ. ಇದರಿಂದ ಇದು ಏನನ್ನು ಸೂಚಿಸುತ್ತದೆ, ಕಾದಂಬರಿಕಾರರ ಹಿತಾಸಕ್ತಿಯು ದಲಿತರಭೂಮಿಯಪ್ರಶ್ನೆಯನ್ನು ಗೌಣಗೊಳಿಸುವುದೇ? ಅಥವಾ ಕಾದಂಬರಿಕಾರ ಪ್ರತಿಗಾಮಿತನದಲ್ಲಿ ದಲಿತರನ್ನು ನೋಡಿರುವುದರ ಪರಿಣಾಮ ದಲಿತರ ಹಕ್ಕಿನ ಪ್ರಶ್ನೆ ದೂರವಾಯಿತೆ? ಗೊತ್ತಿಲ್ಲ. ಆದರೆ ದಲಿತರ ಮುಖ್ಯ ಸಮಸ್ಯೆಯನ್ನು ಮುಚ್ಚಿಡುವ ರೀತಿ ಓದುಗರಿಗೆ ಭಾಸವಾಗುತ್ತದೆ.

ಬಸವರಾಜ ಕಟ್ಟೀಮನಿಯವರ ಹರಿಜನಾಯಣ ದಲ್ಲಿ ದಲಿತರು ಅಲ್ಪಸ್ವಲ್ಪ ತುಂಡು ಭೂಮಿಯಿದ್ದರೂ ಆರ್ಥಿಕ ಮುಗ್ಗಟ್ಟಿನಿಂದಾಗಿ ಸವರ್ಣೀಯ ಭೂ ಮಾಲೀಕರಲ್ಲಿ ಒತ್ತೆಯಿಟ್ಟಿರುವುದನ್ನು ನೋಡುತ್ತೇವೆ. ದಲಿತ ಸಮುದಾಯಗಳು ಹೊಂದಿದ್ದ ಭೂ ಒಡೆತನವು ಸಾಲ ಅಥವಾ ಜೀವನ ನಿರ್ವಹಣೆಗಾಗಿ ಮಾರಿಕೊಳ್ಳಬೇಕಾದ ಸಂದರ್ಭಗಳು ಬಂದಿರುವುದನ್ನು

ಇಲ್ಲಿ ಗಮನಿಸಬಹುದು. 'ಕುಡಿಯರ ಕೂಸು' ಕಾದಂಬರಿಯಲ್ಲಿ ಏಲಕ್ಕಿ ಕೃಷಿಯನ್ನು ವಿಸ್ತರಿಸುವುದರ ಮೂಲಕ ಕುಡಿಯರ ಭೂಮಿಯನ್ನು ಭೂಮಾಲೀಕ ವರ್ಗ ವಂಚಿಸುತ್ತದೆ. ನಿರಂಜನರ ಚಿರಸ್ಮರಣೆಯಲ್ಲಿ ದುಡಿಯುವ ಜನರು 'ಭೂಮಿಯ ಹಕ್ಕಿಗಾಗಿ' ನಡೆಸಿದ ಹೋರಾಟದ ಚರಿತ್ರೆಯನ್ನು ಕಾದಂಬರಿಯು ಚರ್ಚಿಸುತ್ತದೆ. ಭೂಮಿಯ ಹಕ್ಕಿನಿಂದ ವಂಚನೆಗೆ ಒಳಗಾದ ರೈತರು ಸಂಘಟಿತರಾಗಿ ಭೂಮಾಲೀಕ ವ್ಯವಸ್ಥೆಯ ವಿರುದ್ಧ ಹೋರಾಡಿದನ್ನು ಕಾಣುತ್ತೇವೆ. ದೇವನೂರು ಮಹಾದೇವರ ಕಾದಂಬರಿಯಲ್ಲಿ ದಲಿತರ ಭೂ ಒಡೆತನದ ಸಮಸ್ಯೆಯನ್ನು ನೋಡುತ್ತೇವೆ. ಒಡಲಾಳದಲ್ಲಿ ಸಾಕವ್ವಗೆ ಮನೆ ಹಾಗೂ ನಾಲ್ಕು ಎಕರೆ ಜಮೀನು ಇರುವ ವಿಚಾರ ಪ್ರಸ್ತಾಪವಾಗಿದೆ. ಆದರೆ ಈ ಜಮೀನು ಫಲವತ್ತಾದ ಜಮೀನು ಆಗಿಲ್ಲ. ಇನ್ನೂ ಕುಸುಮಬಾಲೆಯಲ್ಲಿ ಚೆನ್ನನ ತಾಯಿ ಹೇಳುವುದು "ಇನ್ನೊಂದು ಗಂಡ್ನೂ ಜೀತ್ಕ ಇರುಸ್‌ಬುಡಾವು. ಹೊಲ್ವ ಬೋಗ್ಯಕ್ಕ ಹಾಕ್ ಬುಡಾವು"[3] ಎನ್ನುತ್ತಾಳೆ. ಇದರಿಂದ ದಲಿತರಿಗೆ ಅಲ್ಪಸ್ವಲ್ಪ ಭೂಮಿ ಹೊಂದಿದ್ದರು, ಜೀತಕ್ಕೆ ಹೋಗುವುದು ತಪ್ಪಿರಲಿಲ್ಲ ಎಂಬುವುದನ್ನು ಪ್ರತಿಪಾದಿಸುತ್ತದೆ. ಚನ್ನಣ್ಣ ವಾಲೀಕರ ಅವರ 'ಒಂದು ಹೆಣ್ಣಿನ ಒಳಜಗತ್ತು' ಕಾದಂಬರಿಯಲ್ಲಿ ಜೀತಗಾರನ ಹೆಸರಲ್ಲಿ ಮಾಲೀಕ ಭೂ ಖಾತೆಯನ್ನು ಮಾಡಿಸಿಕೊಳ್ಳುತ್ತಾನೆ. ಇದು ಕಾಗದದ ಮೇಲಿನ ಭೂಮಿಯ ಹಕ್ಕಾಗಿ ಕಾಣಿಸುತ್ತದೆ. ಹೀಗೆ ದಲಿತ ಬಂಡಾಯ ಕಾದಂಬರಿಗಳು ಭೂ ಒಡೆತನ ಹೊಂದಿರುವ ವ್ಯವಸ್ಥೆಯಲ್ಲಿನ ಅನೇಕ ಸಮಸ್ಯೆಗಳನ್ನು ಚರ್ಚಿಸಿವೆ. 'ಮಾಗಿ'ಯಲ್ಲಿ ಇದಿಯಮ್ಮಳ ಹೊಲವನ್ನು ಅತಿಕ್ರಮವಾಗಿ ಲಪಟಾಯಿಸಿಕೊಳ್ಳುವುದು ಕೂಡ ಜಮೀನ್ದಾರಿ ಪದ್ಧತಿಯೆಂಬ ದಬ್ಬಾಳಿಕೆಯ ಬೀಜವು ಇನ್ನು ಮೊಳೆಯುತ್ತಲೆ ಇದೆ ಎಂಬುದನ್ನು ಧ್ವನಿಸುತ್ತದೆ. 'ಕಾರ್ಯ'ದಲ್ಲಿ ರುದ್ರಗೌಡ ದಶರಥರು ಆತ್ಮಹತ್ಯ ಮಾಡಿಕೊಳ್ಳುವುದು ಜಮಿನ್ದಾರಿ ಸಮಾಜವು ತನ್ನ ಅಂತಸ್ತನ್ನು ಕಳೆದುಕೊಳ್ಳುತ್ತಿರುವುದನ್ನು ಸೂಚಿಸುತ್ತದೆ.

'ಸೂರ್ಯ' ಕಾದಂಬರಿಯಲ್ಲಿ ಕರಿಯ ಜೀತದ ಆಳು. ಗೌಡನ ಅಪ್ಪಣೆ ಇಲ್ಲದೆ ಒಂದು ಹುಲ್ಲು ಕಡ್ಡೀನೂ ಅಲುಗಾಡೋ ಆಗಿಲ್ಲ. ಅಂತಹ ಹೀನಾಯ ಸ್ಥಿತಿಯಲ್ಲಿ ಜೀತಗಾರರನ್ನು ನಡೆಸಿಕೊಳ್ಳುತ್ತಿರುತ್ತಾರೆ, ಇವನ ಮೇಲಿನ ದೌರ್ಜನ್ಯವನ್ನು ನೋಡಲಾಗದೆ ಗೌಡನ ಹೆಂಡತಿ ಸೀತಕ್ಕನು ತನ್ನ ಗಂಡನ ದೌರ್ಜನ್ಯವನ್ನು ಪ್ರತಿಭಟಿಸುತ್ತಾಳೆ ಹಾಗೂ ಊಳಿಗಮಾನ್ಯ ದಬ್ಬಾಳಿಕೆಯನ್ನು ಒಡೆಯುವ ಪ್ರಯತ್ನ ಮಾಡಿದ್ದಾಳೆ. ನಂತರ ಆಕೆ ಮೇಲ್ವರ್ಗದ ಮೌಲ್ಯಗಳನ್ನು ಧಿಕ್ಕರಿಸಿ ಕರಿಯನ ಜೊತೆ ಹೋಗುವುದು ನೋಡಬಹುದು. ಚಿರಸ್ಮರಣೆಯಲ್ಲಿ "ದಲಿತ ಕೋಟೆಯ ಎಲುಬುಗೂಡಿನ ಮೇಲೆ ಕಟ್ಟಿದ ಈ ಸಾಮ್ರಾಜ್ಯ ಖಂಡಿತ ಪುಡಿಪುಡಿಯಾಗ್ತದೆ! ಲೋಕದೆಲ್ಲ ದುಡಿಯುವ ಜನ ವಿಜಯ ಪತಾಕೆ ಹಾರಿಸಿಯೇ ಹಾರಿಸ್ತಾರೆ"[4] ಎನ್ನುವ ಕುಂಞಂಬುನ ಮಾತಾಗಲಿ, 'ಹೊಲೇಗೇರಿಯ ರಾಜಕುಮಾರ' ಕಾದಂಬರಿಯಲ್ಲಿ ಮಾದೇವನ ಮಾತು 'ಸಂಖ್ಯೆಯಲ್ಲಿ ದಲಿತರು ಕಡಿಮೆ ಇರಬಹುದು. ಅವರು ಅವಿದ್ಯಾವಂತರಿರಬಹುದು, ಆದರೆ ಅವರು ಈಗ ಪ್ರಜ್ಞಾವಂತರಾಗಿದ್ದಾರೆ. ಶತಶತಮಾನಗಳಿಂದ ಅವರನ್ನು ಬಿಗಿದಿಟ್ಟ ಬೇಡಿಯನ್ನು ಕಳಚಲು ಸೆಟೆದೆದ್ದು ನಿಂತಿದ್ದಾರೆ. ಸಾವಿರಾರು ವರ್ಷಗಳಿಂದ ನೋವು ನುಂಗಿದ ಅವರು ಬೆಂಕಿಯ ಉಂಡೆಯಾಗಿದ್ದಾರೆ, ಒಂದು ಕಿಡಿ ಬೆಂಕಿ, ಮನೆ, ಊರು, ದೇಶ ಈ ಜಗ್ಗತ್ತನ್ನು ಸುಡಬಲ್ಲದಾದರೆ, ಖಂಡಿತವಾಗಿಯೂ ಅವರು ಈ ಅಸಮಾನತೆಯ ವ್ಯವಸ್ಥೆಯನ್ನು ಧ್ವಂಸಗೊಳಿಸಬಲ್ಲರು, ಎನ್ನುವ ಮಾತು ದಲಿತ ಪರವಾದ ಸೃಜನಶೀಲವಾದ ನಿರೂಪಣೆಯಾಗಿ ಬಂದಿವೆ.

ಒಟ್ಟಾರೆ ಕನ್ನಡ ಕಾದಂಬರಿ ಸಾಹಿತ್ಯವು ದಲಿತರ ಭೂ ಸಮಸ್ಯೆಗಳನ್ನು ಹೆಚ್ಚು ಚರ್ಚಿಸಿದೆಯೇ ಹೊರತು ದಲಿತರ ಭೂ ಒಡೆತನದ ಪ್ರಶ್ನೆಯನ್ನು ದುಡಿಯುವ

ವರ್ಗದ ಪ್ರಜ್ಞೆಯ ಭಾಗವಾಗಿ ಗ್ರಹಿಸುವುದಿಲ್ಲ. ದಲಿತರ ಸಮಸ್ಯೆಗಳನ್ನು ಗ್ರಹಿಸಿವೆಯಾದರೂ ಅದಕ್ಕೆ ಪರ್ಯಾಯವನ್ನು ಸೂಚಿಸುವಲ್ಲಿ ಆಳುವ ವರ್ಗದ ಭಾಗವಾಗುತ್ತವೆ. ಈ ಮಿತಿಯು ಎಲ್ಲ ಕಾಲದ ಕಾದಂಬರಿಗಳಲ್ಲಿ ಕಾಣಿಸುತ್ತದೆ. ಹಾಗಾಗಿ ವ್ಯವಸಾಯವನ್ನು ನಂಬಿ ಬದುಕುತ್ತಿರುವ ದಲಿತರಿಗೆ ಭೂಮಿಯ ಒಡೆತನ ಮುಖ್ಯ. ಈ ಕಾರಣಕ್ಕಾಗಿ ಇಡೀ ಸಮುದಾಯ ಕೂಲಿಗಳಾಗಿ ಉಳಿದು ಹೋಗಿದ್ದಾರೆ. ಅವರನ್ನು ಕೂಲಿಗಳ ಮಟ್ಟಕ್ಕೆ ತಳ್ಳಿರುವ ವ್ಯವಸ್ಥೆಯ ಬದಲಾವಣೆ ಅಗತ್ಯವಿದೆ. ಇಲ್ಲವಾದರೆ ಅದೇ ಜೀತಗಾರಿಕೆ, ಅದೇ ಜಾತಿವಾದವು ಮುಂದುವರೆಯುತ್ತದೆ. ಹಾಗಾಗಿ ಕೆಲವು ಜಾತಿಗಳ ಹಿಡಿತದಲ್ಲಿ ಇರುವ ಭೂಮಿಯ ಒಡೆತನವನ್ನು ಗಮನಿಸಿ ಡಾ.ಬಿ.ಆರ್.ಅಂಬೇಡ್ಕರ್ ಅವರು 'ಭೂಮಿಯ ರಾಷ್ಟ್ರೀಕರಣ' ಬೇಡಿಕೆಯನ್ನು ಮುಂದಿಡುತ್ತಾರೆ. ಈ ಮೂಲಕ ಭೂಮಿಯ ಅಸಮಾನ ಹಂಚಿಕೆಗೆ ಕೊನೆ ಹೇಳುಬಹುದು ಎಂದು ಅವರು ಭಾವಿಸಿದ್ದರು ಜೊತೆಗೆ ಸಂವಿಧಾನವು ಕೂಡ ಎಲ್ಲರಿಗೂ ಬದುಕಲು ಸಾಲುವಷ್ಟು ಜೀವನ ಸಾಧನಗಳನ್ನು ಹೊಂದುವ ಹಕ್ಕು ಇದೆ ಎಂದು ಹೇಳುತ್ತದೆ. ಆದರೆ ಇಲ್ಲಿಯವರೆಗೆ ಭೂಮಿಯ ಸಮಾನ ಹಂಚಿಕೆ ಆಗಲಿಲ್ಲ ದಲಿತರ ಭೂ ಸಮಸ್ಯೆಗಳು ಸಮಸ್ಯೆಯಾಗಿಯೇ ಉಳಿದಿವೆ. ದಲಿತರು ಬಡತನದಿಂದ ಹೊರ ಬರಲು, ಆರ್ಥಿಕ ಪರಿಸ್ಥಿತಿ ಸುಧಾರಿಸಲು, ಆತ್ಮವಿಶ್ವಾಸ, ಸ್ವಾಭಿಮಾನದ ಬದುಕನ್ನು ನಡೆಸಲು ಮತ್ತು ದಲಿತ ಮಹಿಳೆಯರು ದೈಹಿಕ ಮತ್ತು ಮಾನಸಿಕ ದೌರ್ಜನ್ಯದಿಂದ ಹೊರಬರಲು ಹಾಗೂ ದಲಿತ ಸಮುದಾಯವು ಶಿಕ್ಷಣದ ಕಡೆಗೆ ಒಲವು ತೋರಲು ಭೂ ಒಡೆತನದ ಅವಶ್ಯಕತೆಯು ಬಹಳವಾಗಿದೆ. ಹಾಗಾಗಿ ದಲಿತರ, ದಮನಿತರ, ಮಹಿಳೆಯರ ಭೂಮಿಯ ಒಡೆತನವು ಸಾಮಾಜಿಕ ಬದಲಾವಣೆಗೆ ನಾಂದಿಯಾಗಬಹುದು.

**ಕೊನೆಟಿಪ್ಪಣಿಗಳು**


1. ಶಿವರಾಮ ಕಾರಂತ. (2020). *ಚೋಮನ ದುಡಿ.* (ಮೂವತ್ತೊಂದನೇ ಮುದ್ರಣ), ಸಪ್ನ ಬುಕ್‌ಹೌಸ್. ಪು.117.
2. ಕುವೆಂಪು. (2013). *ಮಲೆಗಳಲ್ಲಿ ಮದುಮಗಳು.* ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಪು.2.
3. ದೇವನೂರು ಮಹಾದೇವ. (2014). ಕುಸುಮಬಾಲೆ. (ಹತ್ತನೆಯ ಮುದ್ರಣ), ಪುಸ್ತಕ ಪ್ರಕಾಶನ.
4. ನಿರಂಜನ. (2011). *ಚಿರಸ್ಮರಣೆ.* ಡಿ.ವಿ.ಕೆ. ಮೂರ್ತಿ. ಪು.276.